

## ಆ ತಲೆಮಾರಿನ ಸ್ವಿಚ್ ಬೋರ್ಡ್!

ಈ ಚಿತ್ರದಲ್ಲಿ ಕಾಣುವ ಸ್ವಿಚ್ ಬೋರ್ಡ್ ಅರವತ್ತು–ಎಪ್ಪತ್ತರ ದಶಕದ್ದು. ಶೃಂಗೇರಿಯಲ್ಲಿದ್ದ ನಮ್ಮ ಮನೆಯಲ್ಲಿ ಇಂತಹ ಸ್ವಿಚ್ ಬೋರ್ಡ್ ಇತ್ತು. ಬಾಲ್ಯದಲ್ಲಿ ತುಂಟನಾಗಿದ್ದ ನನಗೆ ಶಿಕ್ಷೆ ನೀಡಲು ಅಪ್ಪ–ಅಮ್ಮ ಈ ಸ್ವಿಚ್ ಬೋರ್ಡಿನ ಮೇಲೆ ಲಕ್ಕಿ ಗಿಡದ ಬರಲು (ಕೋಲು/ಬೆತ್ತ) ಇಟ್ಟಿರುತ್ತಿದ್ದರು. ಒಮ್ಮೆ ನಾನೇನೋ ತಪ್ಪು ಮಾಡಿದ್ದಕ್ಕೆ ಅಪ್ಪ ಈ ಕೋಲು ಎತ್ತಿಕೊಂಡು ಹೊಡೆಯಲು ಮುಂದಾದರು. ಆ ಕೋಲನ್ನು ಅಮ್ಮ ಹೆಚ್ಚಾಗಿ ಬಳಸುತ್ತಿದ್ದ ಕಾರಣಕ್ಕೆ ನಾನಾಗ ಅಳುತ್ತಾ, 'ಅಪ್ಪಾ ಅದು ನಿಮ್ಮದಲ್ಲ, ಅಮ್ಮನ ಕೋಲು' ಅಂದಿದ್ದೆ. ಅದನ್ನು ಕೇಳಿಸಿಕೊಂಡ ಅಪ್ಪನಿಗೆ ನಗು ಬಂದು ಹೊಡೆಯುವುದರಿಂದ ಹಿಂದೆ ಸರಿದರು. ಈ ಬಗ್ಗೆ ಅಮ್ಮ ಸಾಕಷ್ಟು ಬಾರಿ ಹೇಳುತ್ತಿದ್ದರು.

ಕೋಲು ಮಾತ್ರವಲ್ಲ ಔಷಧದ ಬಾಟಲಿ, ನಶೆ ಡಬ್ಬಿ, ರಂಗೋಲಿ ಡಬ್ಬಿ ಹಾಗೂ ಇನ್ನಿತರ ಚಿಕ್ಕಪುಟ್ಟ ನಿತ್ಯೋಪಯೋಗಿ ವಸ್ತುಗಳನ್ನೂ ಈ ಬೋರ್ಡ್ ಮೇಲಿಟ್ಟಿರುತ್ತಿದ್ದದ್ದು ನನಗೆ ಇನ್ನೂ ನೆನಪಿದೆ. ಒಂದು ರೀತಿಯಲ್ಲಿ ಬಹೂಪಯೋಗಿಯಾಗಿದ್ದ ಈ ಸ್ವಿಚ್ ಬೋರ್ಡ್‌ಗಳು ನಮ್ಮೂರಿನ ಕೆಲವು ಹಳೆಯ ಮನೆಗಳಲ್ಲಿ ಈಗಲೂ ಕಾಣುತ್ತವೆ. ಅವುಗಳನ್ನು ನೋಡಿದಾಗಲೆಲ್ಲ ಅಪ್ಪ ನನಗೆ ಹೊಡೆಯಲು ಬಂದು ನಕ್ಕಿದ್ದು ನೆನಪಾಗಿ ಮುಗುಳುನಗೆ ಬೀರುವೆ!

–ಎಚ್.ಎಸ್. ನಂದಕುಮಾರ್, ಮಂಗಳೂರು

## ಹೆಂಚಿನ ಕಾಂಪೌಂಡ್

ಕುಂದಾಪುರಕ್ಕೆ ಹೋಗಿದ್ದಾಗ ಪ್ರಯಾಣದ ಹಾದಿಯಲ್ಲಿ ಹಲವು ಕಡೆ ಹೆಂಚಿನ ಕಾಂಪೌಂಡ್‌ಗಳು ಕಣ್ಣಿಗೆ ಬಿದ್ದವು! ಸಾಮಾನ್ಯವಾಗಿ ಕಾಂಪೌಂಡ್ ನಿರ್ಮಾಣವಾಗುವುದು ಮಣ್ಣಿನ ಇಟ್ಟಿಗೆಯಿಂದ, ಕಲ್ಲುಗಳಿಂದ, ಸಿಮೆಂಟ್ ಇಟ್ಟಿಗೆಯಿಂದ. ಇಲ್ಲಿ ನೋಡಿದರೆ ಹೆಂಚಿನಿಂದ ಕಾಂಪೌಂಡ್ ನಿರ್ಮಿಸಿರುವುದು ವಿಚಿತ್ರವೆನಿಸಿತು. ಸ್ಥಳೀಯರನ್ನು ವಿಚಾರಿಸಿದಾಗ ಕಾರ್ಖಾನೆಯಲ್ಲಿ ತಯಾರಾಗುವ ಹೆಂಚುಗಳ ಪೈಕಿ ಸಾಕಷ್ಟು ಹೆಂಚುಗಳು ಹಾನಿಗೊಂಡಿರುತ್ತವೆ. ಹೀಗೆ ಹಾನಿಗೊಂಡ ಹೆಂಚುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತದೆ. ಹೀಗಾಗಿಯೇ, ಈ ಭಾಗದವರು ಮುಕ್ಕಾದ ಹಂಚುಗಳನ್ನು ಖರೀದಿಸಿ ತಮ್ಮ ಜಮೀನಿನ ಸುತ್ತ ಕಾಂಪೌಂಡ್ ನಿರ್ಮಿಸುತ್ತಾರೆ. ಕಲ್ಲು, ಮಣ್ಣಿನ ಇಟ್ಟಿಗೆ, ಸಿಮೆಂಟ್ ಇಟ್ಟಿಗೆಯಿಂದ ಕಾಂಪೌಂಡ್ ನಿರ್ಮಾಣಕ್ಕಾಗುವ ಅರ್ಧದಷ್ಟು ವೆಚ್ಚವಷ್ಟೇ ಹೆಂಚಿನ ಕಾಂಪೌಂಡ್‌ಗೆ ಖರ್ಚಾಗುತ್ತದೆ. ಬಾಳಿಕೆಯೂ ಹೆಚ್ಚು. ಹಿಂದೆಲ್ಲಾ ಹೆಂಚಿನ ಮನೆಗಳನ್ನು ಕಾಣುತ್ತಿದ್ದ ನಮಗೆ ಈಗ 'ಹೆಂಚಿನ ಕಾಂಪೌಂಡ್' ನೋಡುವ ಕಾಲ ಎದುರಾಗಿದೆ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ





## 'ಬಾತು' ಪ್ರೀತಿ

ಒಮ್ಮೆ ಶಿವಮೊಗ್ಗ ಜಿಲ್ಲೆಯ 'ಅಜ್ಜನಮನೆ' ಎಂಬ ಹೋಂಸ್ಟೇಗೆ ಹೋಗಿದ್ದೆ. ಮಲೆನಾಡಿನ ವಾತಾವರಣ, ಮಂಜು ಮುಸುಕಿದ ಪ್ರಕೃತಿ ಮನಸ್ಸಿಗೆ ಆಹ್ಲಾದಕರವಾಗಿತ್ತು. ಹೋಂಸ್ಟೇ ಪಕ್ಕದಲ್ಲೇ ಕೆರೆಯೊಂದಿದೆ. ಅದು ಬಾತುಕೋಳಿಗಳ ಅಡ್ಡವೆಂದರೂ ತಪ್ಪಾಗದು.

ಹೋಂಸ್ಟೇ ಮಾಲೀಕರ ಆದೇಶದಂತೆ ಕೆಲಸದ ವ್ಯಕ್ತಿ ಒಂದೆರಡು ಸೇರು ಅಕ್ಕಿಯನ್ನು ಒಂದು ಡಬ್ಬದಲ್ಲಿ ಹಾಕಿ, ಸ್ವಲ್ಪ ನೀರು ಸೇರಿಸಿ, ಕೆರೆಯ ಪಕ್ಕದಲ್ಲಿಟ್ಟು, ಒಂದು ಕೋಲಿನಿಂದ ಬಕೆಟ್‌ಗೆ ಬಡಿದರು. ಬಡಿತದ ಸದ್ದಿಗೆ ಆಲಿಸಿದ ಎಲ್ಲ ಬಾತುಕೋಳಿಗಳು ಶಿಸ್ತಿನ ಸಿಪಾಯಿಗಳಂತೆ ಸರತಿ ಸಾಲಿನಲ್ಲಿ ಬಂದು ಅಕ್ಕಿಯನ್ನು ತಿಂದು, ಒಂದೊಂದಾಗಿ ಸ್ವಸ್ಥಾನ ಸೇರಿದವು. ಡಬ್ಬಿಯಲ್ಲಿ ಉಳಿದ ಅಕ್ಕಿಯು ದನ ಕರುಗಳಿಗೆ ಆಹಾರವಾಯಿತು. ಆ ಬಾತುಕೋಳಿಗಳಿಗೂ ಹೋಂಸ್ಟೇ ಮಾಲೀಕರಿಗೂ ಯಾವುದೇ ಸಂಬಂಧವಿಲ್ಲ. ನಿತ್ಯವೂ ಬಾತುಕೋಳಿಗಳಿಗೆ ಆಹಾರ ನೀಡುವುದನ್ನು ತಮ್ಮ ಕರ್ತವ್ಯವೆಂದು ಅವರು ಭಾವಿಸಿದ್ದಾರೆ.

–ಪುಷ್ಪ ಎನ್.ಕೆ. ರಾವ್, ಉಡುಪಿ